**ಓ.ಎಸ್ಃ 357/2018**
**ಪಿ.ಡಬ್ಲ್ಯೂಃ 01**
**ರಾಜೇಸಾಬ್ ಲೋಗಾವಿ**

**<u>ದಿನಾಂಕಃ 12-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**
**<u>ಪಾಟೀ ಸವಾಲು 1,2 ಮತ್ತು 4 ಪ್ರತಿವಾದಿಗಳ ಪರ ಶ್ರೀ ಎಂ.ಹೆಚ್.ಕೆ ವಕೀಲರಿಂದಃ</u>**

**1**. ಅಸಲು ದಾವಾ ನಂಬರ 27/1977 ರಲ್ಲಿ ಸ.ನಂಬರ 44, ಅಂದಾಜು 7 ಎಕರೆ ಜಮೀನು, ಸ.ನಂಬರ 46, ಅಂದಾಜು 62 ಎಕರೆ, ಸ.ನಂಬರ 473, 36 ಎಕರೆ 15 ಗಂಟೆ ಜಮೀನು, ಸ.ನಂಬರ 45, 12 ಎಕರೆ ಜಮೀನುಗಳಿಗೆ ಸಂಬಂಧಿಸಿದಂತೆ ಹಾಕಲಾಗಿತ್ತು, ಸದರಿ ಜಮೀನುಗಳು ಮಸಬಿನಾಳ ಗ್ರಾಮದಲ್ಲಿವೆ. ಸದರಿ ದಾವೆಯನ್ನು ನನ್ನ ತಂದೆ ಹಸನಸಾಬ್ ಅವರ ದೂರಿನ ಸಹೋದರರಾದ ಸಾಹೇಬಲಾಲ್, ಗೈಬುಸಾಬ್, ದಸ್ತಗಿರಸಾಬ್, ಕಾಸಿಂಸಾಬ್ ಇವರ ವಿರುದ್ಧ ಸಲ್ಲಿಸಿದ್ದರು.

2. ಸದರಿ ದಾವೆಯಲ್ಲಿ ನನ ತಂದೆಯ ಪಾಲಿಗೆ ಎಷ್ಟು ಪಾಲು ಬಂದಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ದಾವೆಯು E.P No. 292/1986 ರಲ್ಲಿ Final Decree ಆಗಿದೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ನ್ಯಾಯಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನಾನು ವಕೀಲರಿಗೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಆದ ಪ್ರಾಥಮಿಕ ಡಿಕ್ರಿಯು ಇಲ್ಲಿಯವರೆಗೂ Final Decree ಆಗಿ ಆದೇಶವಾಗಿಲ್ಲ ಎಂದರೆ ಸರಿಯಲ್ಲ. Final Decree ಆಗದಿದ್ದರೂ ನಾನು ಡ ನಂಬರ 4217, 3732 ಮತ್ತು 1263 ಗಳನ್ನು ಖೊಟ್ಟಿಯಾಗಿ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

3. ಡ ನಂಬರ 4217 ನ್ನು ಮಾನ್ಯ ಉಪವಿಭಾಗಾಧಿಕಾರಿಗಳು ರದ್ದುಗೊಳಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. Final Decree ಆಗದಿದ್ದರೂ ದಾವಾ ಸ್ವತ್ತುಗಳು ನನ್ನ ತಂದೆಯ ಪಾಲಿಗೆ ಬಂದಿವೆ ಎಂದು ಖೊಟ್ಟಿ ಡ ಗಳನ್ನು ಸೃಷ್ಟಿಸಿಕೊಂಡು ಈಗ

ಪ್ರತಿವಾದಿಗಳ ವಿರುದ್ದ ಈ ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಅಸಲು ದಾವಾ ನಂಬರ 27/1977 ರಲ್ಲಿ ಸ.ನಂಬರ 473 ರಲ್ಲಿ ಸಾಹೇಬಲಾಲ್ ಗೈಬುಸಾಬ್ ಲೋಗಾವಿಯವರಿಗೆ, ಖಾಸಿಂಸಾಬ್ ಇಮಾಮಸಾಬ್ ಲೋಗಾವಿ ಮತ್ತು ದಸ್ತಗಿರಿಸಾಬ್ ಇಮಾಮಸಾಬ್ ಲೋಗಾವಿಯವರಿಗೆ ಒಟ್ಟಾಗಿ ಅಂದಾಜು 36 ಎಕರೆ ಜಮೀನು ಬಂದಿರುತ್ತದೆ. ಇನ್ನುಳಿದ ಎಲ್ಲಾ ಆಸ್ತಿಗಳು ನಮಗೆ ಬಂದಿರುತ್ತವೆ.

5. ಅಸಲು ದಾವಾ ನಂಬರ 27/1977 ರಲ್ಲಿ ಆದ ಪ್ರಾಥಮಿಕ ಡಿಕ್ರಿ Final Decree ಆಗದ ಕಾರಣ ಸದರಿ ದಾವೆಯ ಎಲ್ಲಾ ಪಕ್ಷಗಾರರು ಮತ್ತು ಅವರ ವಾರಸುದಾರು ಮತ್ತು ನಾವು ಎಲ್ಲರೂ ಈ ಸಮಯದವರೆಗೂ ಸದರಿ ದಾವೆಯಲ್ಲಿ ಇದ್ದ ಎಲ್ಲಾ ದಾವಾ ಆಸ್ತಿಗಳ ಜಂಟಿ ಕಬ್ಜಾದಲ್ಲಿ ಇದ್ದೇವೆ ಎಂದರೆ ಸರಿಯಲ್ಲ. ಎಲ್ಲರು ಅವರವರ ಪಾಲಿನಲ್ಲಿದ್ದಾರೆ ಎಂದು ನುಡಿಯುತ್ತಾರೆ. ನಾನು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮರವಿಚಾರಣೆ ಇಲ್ಲ

ಪಾಟೀಸವಾಲು **3** ನೇ ಪ್ರತಿವಾದಿಯರ ಪರ ವಕೀಲರಿಂದ-**1,2,4** ನೇ ಪ್ರತಿವಾದಿಯರ ಪರ ವಕೀಲರು ಮಾಡಿದ ಪಾಟೀಸವಲನ್ನೇ ಅಳವಡಿಸಿಕೊಂಡಿರುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**